<u>ದಿನಾಂಕಃ 29-03-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಹೆಚ್ ಎಸ್ ವಕೀಲರಿಂದಃ-</u>

ನಮ್ಮ ತಂದೆ ತಾಯಿಗೆ ಒಟ್ಟು 6 ಜನ ಮಕ್ಕಳು. ಅವರ ಹೆಸರು ಅನುಸೂಯ, ಯಮುನಾ, ಕಲ್ಯಾಣಿ, ಜನನಿ ಮತ್ತು ಸುಮತಿ ಮತ್ತು ಕೃಷ್ಣಪ್ಪ ಅಂದರೆ ನಾನು ಇರುತ್ತೇವೆ. ನೀವು 10 ಗುಂಟೆ ಜಾಗದಲ್ಲಿ ಜಾಸ್ತಿ ಸ್ವಾದೀನದಲ್ಲಿದ್ದೀರಿ ಅಂತ ನಿಮಗೆ ಯಾವ ಸರ್ವೆಯರ್ ಹೇಳಿದರು ಎಂದರೆ ಜಾಸ್ತಿ ಇದೆ ಅಂತ ಯಾರೂ ಹೇಳಿಲ್ಲ ನನ್ನ ಹತ್ತಿರ 10 ಗುಂಟೆ ಕಡಿಮೆ ಇದೆ ಅಂತ ಬಸವರಾಜು ಎನ್ನುವ ಸರ್ವೆಯರ್ ಹೇಳಿದರು. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಹಿಂದೆ ನೀವು ಡಿಡಿಎಲ್‌ಆರ್ ರವರ ಮುಂದೆ ಯಾವ ಉದ್ದೇಶಕ್ಕಾಗಿ ಅಪೀಲು ಹಾಕಿದ್ದೀರಿ ಎಂದರೆ ಹಂಸವಾಣಿ ಎನ್ನುವ ಸರ್ವೆಯರ್ ನನಗೆ ನೋಟಿಸು ಕೊಟ್ಟಿದ್ದರು ಬಸವರಾಜು ಎನ್ನುವ ಸರ್ವೆಯರ್ ಬಂದಿದ್ದರು ಒಂದು ಸಾರಿ ಸರ್ವೆ ಮಾಡಿ ಸರಿ ಇದೆ ಅಂತ ಹೇಳಿದರು ಮತ್ತೆ ಫೋನ್ ಮಾಡಿ ಕರೆಸಿಕೊಂಡು ನನ್ನದರಲ್ಲಿ ಜಾಸ್ತಿ ಇದೆ ಅಂತ ಹೇಳಿ ನನ್ನ ಜಾಗವನ್ನು ಅವರಿಗೆ ಬರೆದರು ಅದಕ್ಕಾಗಿ ಅಪೀಲು ಹಾಕಿದ್ದೇನೆ. ಈ ಪೋಡಿ ಯಾವಾಗ ಆಗಿದ್ದು ಎಂದರೆ ಅದು ಹಿಂದೆ ನಮ್ಮ ತಂದೆ ಕಾಲದಲ್ಲಿ ಆಗಿತ್ತು. ಅವರು ಮೊದಲು ಮಾಡಿದ ಅಳತೆ ಸ್ಕೆಚ್ ನಂತರ ಮಾಡಿದ ಅಳತೆಯ ಸ್ಕೆಚ್ ತಂದು ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇಲ್ಲಾ ಎಂದರೆ ಅದನ್ನು ಕೊಟ್ಟಿದ್ದೇನೆ. ಪಿ ಸೀರಿಸ್ ದಾಖಲೆ ನೋಡಿ ಆ ಎರಡು ನಕ್ಷೆಗಳು ಯಾವುದು ಅಂತ ತೋರಿಸಲು ಆಗುತ್ತದೆಯಾ ಎಂದರೆ ನನಗೆ ಬಸವರಾಜ್ ಸರ್ವೆಯರ್ ನಕ್ಷೆ ಕೊಟ್ಟಿಲ್ಲ. ನಿಮಗೆ ತಪ್ಪು ಮಾಹಿತಿ ನೀಡಿದ ಬಗ್ಗೆ ಕೊಟ್ಟ ದೂರಿನ ನಕಲನ್ನು ನ್ಯಾಯಾಲಯಕ್ಕೆ ತಂದು ಹಾಜರುಮಾಡಬಹುದಾ ಎಂದರೆ ತಂದು ಹಾಜರುಮಾಡಬಹುದು. ನಿಮಗೆ ನಿಮ್ಮ ಜಾಗ ಕಡಿಮೆ ಇದೆ ಅಂತ ಯಾವಾಗ ಗೊತ್ತಾಯಿತು ಎಂದರೆ ಎರಡು ವರ್ಷ ಆಯಿತು ತಾರೀಖು ಮರೆತುಹೋಗಿದೆ. ನಾನು ಡಿಡಿಎಲ್‌ಆರ್ ಬಳಿ ಅಪೀಲು ಹಾಕುವ ಮುಂಚೆಯೇ ಪ್ರತಿವಾದಿಯರು ನನ್ನ ಜಾಗ ಒತ್ತುವರಿ ಮಾಡಿದ್ದರು. ನಾನು ಡಿಡಿಎಲ್‌ಆರ್ ಮುಂದೆ ಅಪೀಲು ಹಾಕಿದಾಗ ಈ ರೀತಿ ಒತ್ತುವರಿ ಮಾಡಿದ್ದಾರೆ ಅಂತ ಹೇಳಿಲ್ಲ ಎಂದರೆ ಸರಿಯಲ್ಲ ಹೇಳಿದ್ದೇನೆ. ಸಾಮಾನ್ಯವಾಗಿ ಕಂದಾಯ ಅಧಿಕಾರಿಗಳು ಸರ್ವೆ ಮಾಡಿದಾಗ ಎಷ್ಟು ಒತ್ತುವರಿ ಯಾಗಿದೆ ಎನ್ನುವುದನ್ನು ಮಾರ್ಕ ಮಾಡಿ ತೋರಿಸುತ್ತಾರೆ ಎಂದರೆ ಸರಿ. ನಿಪಿ-12 ರ ನಕ್ಷೆಯಲ್ಲಿ ಎಷ್ಟು ಒತ್ತುವರಿಯಾಗಿದೆ ಅಂತ ನಮೂದು ಇಲ್ಲಾ ಎಂದರೆ ಸರಿ ಎಡಿಎಲ್‌ಆರ್ ಸರ್ವೆ ಮಾಡಿ ಬರೆದಿದ್ದಾರೆ. ನಕ್ಷೆಯಲ್ಲಿ ಒತ್ತುವರಿಯಾದ ಜಾಗವನ್ನು ತೋರಿಸಲಿಲ್ಲ ಅಂತ ನೀವೇನಾದರೂ ತಕರಾರು ಮಾಡಿದ್ದೀರಾ

ಎಂದರೆ ಇಲ್ಲಾ ಎಡಿಎಲ್‌ಆರ್ ಡೀಟೈಲ್ ಆಗಿ ಬರೆದಿದ್ದಾರೆ. 4 ನೇ ಪ್ರತಿವಾದಿ ನನ್ನ ಅಕ್ಕ ಎಂದರೆ ಸರಿ. 4 ನೇ ಪ್ರತಿವಾದಿ ಅವರ ಗಂಡ ಕ್ರಯಕ್ಕೆ ತೆಗೆದುಕೊಂಡ ಜಾಗದಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ ಅವರ ಜಾಗದಲ್ಲಿ ಅವರು ಇದ್ದಾರೆ. ಅವರದ್ದು 3 ಎಕರೆ 5 ಗುಂಟೆ ಜಾಗ ಇದೆ. ಪ್ರತಿವಾದಿಯರ ಸ್ವತ್ತಿನ ಮೇಲೆ ನನಗೆ ಹಕ್ಕು ಇಲ್ಲಾ ಎಂದರೆ ಸರಿ. ನನ್ನ ಅಕ್ಕಂದಿರ ಪೈಕಿ ಈಗ 3 ಜನ ಜೀವಂತ ಇದ್ದಾರೆ. ಅವರ ಹೆಸರು ಅನುಸೂಯ, ಯಮುನಾ ಮತ್ತು ಸುಮತಿ. ತೀರಿಕೊಂಡ ನನ್ನ ಉಳಿದ ಅಕ್ಕಂದಿರಿಗೆ ವಾರಸುದಾರರು ಮಕ್ಕಳು ಇದ್ದಾರೆ ಎಂದರೆ ಸರಿ. ನನ್ನ ತಂದೆಗೆ ನಾನು ಒಬ್ಬನೇ ವಾರಸುದಾರನಲ್ಲ ಎಂದರೆ ಸರಿ. ನನ್ನ ಉಳಿದ ಅಕ್ಕಂದಿರು ಮತ್ತು ತೀರಿಕೊಂಡ ಅಕ್ಕಂದಿರ ವಾರಸುದಾರರೆಲ್ಲಾ ನನ್ನ ತಂದೆಯ ವಾರಸುದಾರರು ಎಂದರೆ ಸರಿ. ಈ ದಾವಾ ಆಸ್ತಿಗಳಲ್ಲಿ ಅವರಿಗೆ ಹಕ್ಕಿದೆ ಎಂದರೆ ಸರಿಯಲ್ಲ ನನ್ನ ತಾಯಿ ಇದ್ದಾಗಲೇ ಪಾರ್ಟಿಷನ್ ಮಾಡಿಕೊಟ್ಟಿದ್ದಾರೆ. ಆ ಪಾರ್ಟಿಷನ್ ಆದ ತಾರೀಖು ಇಸವಿ ಗೊತ್ತಿಲ್ಲ. ನನ್ನ 4 ಜನ ಅಕ್ಕಂದಿರಿಗೂ ಹಣದ ರೂಪದಲ್ಲಿ ಪಾಲು ಕೊಟ್ಟಿದ್ದಾರೆ. ಎಲ್ಲರಿಗೂ ಆವಾಗ ರೂ. 25,000 ಕೊಟ್ಟಿದ್ದಾರೆ. ಆ ಬಗ್ಗೆ ಬರವಣಿಗೆ ಮಾಡಲಿಲ್ಲ. ಖಾತೆ ನೀವು ಯಾವ ಆಧಾರದ ಮೇಲೆ ಬದಲಾವಣೆ ಮಾಡಿಕೊಂಡಿದ್ದೀರಿ ಎಂದರೆ ಪೌತಿ ಆಧಾರದ ಮೇಲೆ ಮಾಡಿಕೊಂಡಿದ್ದೇನೆ ಮತ್ತು ನನ್ನ ತಾಯಿ ವಿಲ್ ಮಾಡಿದ್ದಾರೆ. ಈ ವಿಭಾಗ ಆಗಿದ್ದು ವಿಲ್ ಮಾಡಿದ್ದು ಎಲ್ಲಾ ವಿಚಾರ ಈ ಕೇಸು ಹಾಕುವ ಸಮಯದಲ್ಲಿ ನನ್ನ ವಕೀಲರಿಗೆ ಹೇಳಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಓದಿ ನೋಡಿದ್ದೇನೆ. ವಿಲ್ ಮಾಡಿದ ಬಗ್ಗೆ ಹಾಗೂ ಪಾರ್ಟಿಷನ್ ಆದ ಬಗ್ಗೆ ಪ್ರಮಾಣಪತ್ರದಲ್ಲಿ ಬರೆದಿಲ್ಲ. ಯಾವ ತಾರೀಖು ವಿಲ್ ಆಗಿದೆ ಎಂದರೆ ಅದು ಹಿಂದೆ ಆಗಿದ್ದು ತಾರೀಖು ಗೊತ್ತಿಲ್ಲ. ಆ ವಿಲ್ ಅನ್ನು ಸ್ಟಾಂಪ್ ವೆಂಡರ್ ವಿಠಲ್ ಬರೆದಿದ್ದಾರೆ. ಆ ವಿಲ್ ಗೆ ಸಾಕ್ಷಿದಾರರಾಗಿ ಮುತ್ತಪ್ಪ ಬಂಗೇರಾ ಅಂದರೆ ನನ್ನ ಬಾವ ಮತ್ತು ಜಾನ್ ಡಿಸೋಜ ಸಹಿ ಮಾಡಿದ್ದಾರೆ. ಅದು ನೋಂದಾಯಿತ ವಿಲ್ಲೋ ಎಂದರೆ ಅದು ನೋಟರಿ ಮುಂದೆ ಮಾಡಿದ್ದು. ಅದು ಯಾವ ನೋಟರಿ ಮುಂದೆ ಮಾಡಿದ್ದು ಎಂದರೆ ಹಿಂದೆ ಆಗಿದೆ ಈಗ ಗೊತ್ತಿಲ್ಲ. ನಿಮಗೆ ವಿಲ್ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿಕೊಳ್ಳಲು ಏನು ತೊಂದರೆ ಇತ್ತು ಎಂದರೆ ಹಿಂದೆ ಮಾಡಿದ್ದಾರೆ ಏನು ಮಾಡಿದ್ದಾರೆ ಅಂತ ಗೊತ್ತಿಲ್ಲ. ಖಾತೆ ಬದಲಾವಣೆಗೆ ನಾನು ಅರ್ಜಿ ಕೊಟ್ಟಿಲ್ಲ ಅದು ಆಟೋಮೇಟಿಕ್ ಆಗಿ ಆಗಿದೆ. ನನ್ನ ತಂದೆ ತೀರಿಕೊಂಡ ನಂತರ ಪೌತಿ ಆಧಾರದ ಮೇಲೆ ನನ್ನ ತಾಯಿ ಹೆಸರಿಗೆ ಖಾತೆ ಆಗಿದೆ. ನನಗೆ 30 ವರ್ಷ ಆದಾಗಿನಿಂದಲೂ ನಾನು ಈ ಜಮೀನು ನೋಡಿಕೊಂಡು ಬರುತ್ತಿದ್ದೇನೆ. ನನಗೆ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ಪೌತಿ ಆಧಾರದ ಮೇಲೆ ನನ್ನ ತಾಯಿಗೆ ಖಾತೆ

ಆಗಿರುವುದು ತಪ್ಪು ವಿಭಾಗದ ಆಧಾರದ ಮೇಲೆ ಮಾಡಿಕೊಡಿ ಅಂತ ಕಂದಾಯ ಅಧಿಕಾರಿಗಳಿಗೆ ನೀವು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಇಲ್ಲ. ಪೌತಿ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಆಗಿದ್ದು ತಪ್ಪು ವಿಲ್ ಆಧಾರದ ಮೇಲೆ ಖಾತೆ ಮಾಡಿಕೊಡಿ ಕೇಳಿ ನಾನು ಕಂದಾಯ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿಲ್ಲ. ಯಾವುದೇ ಪಾರ್ಟಿಷನ್ ಸಹ ಆಗಿಲ್ಲ ವಿಲ್ ಸಹ ಆಗಿಲ್ಲ ಆ ಕಾರಣಕ್ಕಾಗಿ ಖಾತೆ ಸರಿ ಇಲ್ಲಾ ಅಂತ ನಾನು ಯಾವುದೇ ಅರ್ಜಿ ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ. ನನ್ನ ಅಕ್ಕಂದಿರಿಗೆಲ್ಲಾ ರೂ. 25,000 ಹಣ ಕೊಟ್ಟು ವಿಭಾಗಮಾಡಿಕೊಂಡಿದ್ದು ಸುಳ್ಳು ಎಂದರೆ ಸರಿಯಲ್ಲ. ಈ ವಿಲ್ ಮತ್ತು ವಿಭಾಗ ಆಗದೇ ಇರುವ ಕಾರಣ ಈ ವಿಷಯವನ್ನು ವಾದಪತ್ರದಲ್ಲಾಗಲೀ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಆಗಲಿ ತಿಳಿಸಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು 10 ಗುಂಟೆ ಜಾಗವನ್ನು ಒತ್ತುವರಿ ಮಾಡಿ ಅಲ್ಲಿದ್ದ ಬೆಲೆ ಬಾಳುವ ಮರಗಳನ್ನು ತೆಗೆದುಕೊಂಡು ಹೋಗಿದ್ದು ಸುಳ್ಳು ಎಂದರೆ ಸರಿಯಲ್ಲ. ನಾನು ಅದನ್ನು ಬಿಟ್ಟುಕೊಡಿ ಅಂತ ಹೇಳಿದ್ದು ಪ್ರತಿವಾದಿಯರು ಆಗುವುದಿಲ್ಲ ಅಂತ ಹೇಳಿದ್ದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಅದು ರೂ. 60,000 ಬೆಲೆ ಬಾಳುವ ಮರಗಳಾಗಿತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನೇ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಗೊಂದಲಮಯ ರಿಪೋರ್ಟಗಳನ್ನು ಮತ್ತು ನಕ್ಷೆಗಳನ್ನು ತಯಾರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯಲ್ಲಿ ನನ್ನ ತಂದೆಯ ಇತರೇ ವಾರಸುದಾರರಿಗೂ ಹಿಸ್ಸೆ ಇದೆ ಅದಕ್ಕಾಗಿ ನನ್ನ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯಲು ಅವರನ್ನೆಲ್ಲಾ ಪಕ್ಷಗಾರರನ್ನಾಗಿ ಮಾಡದೇ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರ, ಐ ಆರ್, ಆರ್ ಆರ್ ಹೊರತುಪಡಿಸಿ ನಾನು ಹಾಜರುಪಡಿಸಿದ ಎಲ್ಲಾ ದಾಖಲೆಗಳು ಈ ಕೇಸಿಗಾಗಿ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಓಃಹೇಃಕೇಃಸಃಇಃವಿಃಓಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿಜೆಎಂ, ಚಿಕ್ಕಮಗಳೂರು.